KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**
**S.C (SESSION CASES)/2/2021**

Complainant(PROSECUTION):
State by Jayapura Police, Rept. by The Public Prosecutor, Chikkamagaluru.

**VERSUS**

Accused: Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

----------------------------------------------------------------------------

State Complainant}: The Public Prosecutor, Chikkamagaluru.,
Advocate for I.S. THEJASVI appearing for Sreeraj @ Annaiah

----------------------------------------------------------------------------

**Offence punishable under : SEC.314. of INDIAN PENAL CODE,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**S.C. No:02/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸೂರಪ್ಪ ಎಸ್.ಎನ್. | ಪ್ರಾ.ಸಾ.- 12 |
| ತಂದೆ ಹೆಸರು | : | ಲೇಟ್ ನಾಗಪ್ಪಗೌಡ | ಚಾ.ಸಾ.- 22 |
| ವಯಸ್ಸು | : | 64 ವರ್ಷ | |
| ಉದ್ಯೋಗ | : | ನಿವೃತ್ತ ಎ ಎಸ್ ಐ | |
| ವಾಸ ಸ್ಥಳ | : | ಕೊಪ್ಪ | |

**ದಿನಾಂಕಃ 10-11-2025**

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ವೀಣಾ -ಪಿ.ಪಿ.ಯವರಿಂದಃ**

1. 2015 ರಿಂದ ಮೇ-2021 ರವರೆಗೆ ನಾನು ಜಯಪುರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 18-02-2019 ರಂದು ಸಾಯಂಕಾಲ 7.30 ಗಂಟೆಗೆ ಠಾಣಾ ಎಸ್ ಎಚ್ ಒ ಕರ್ತವ್ಯದಲ್ಲಿದ್ದಾಗ ಈ ಪ್ರಕರಣದ ಫಿರ್ಯಾದುದಾರರು ಠಾಣೆಗೆ ಹಾಜರಾಗಿ ಕೊಟ್ಟ ನಿ.ಪಿ.1-ಲಿಖಿತ ಫಿರ್ಯಾದನ್ನು ಸ್ವೀಕರಿಸಿಕೊಂಡು ಪ್ರಕರಣ ದಾಖಲು ಮಾಡಿರುತ್ತೇನೆ. ನಿ.ಪಿ.1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ನಿ.ಪಿ. 29 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 29(ಎ) ಎಂದು ಗುರುತಿಸಲಾಯಿತು.

3. ನಂತರ ಅದೇ ದಿನ ಹೆಚ್ ಸಿ 356 ಅಂದರೆ ಚಾಸಾ-21 ರವರು ಮತ್ತು ಪಿಸಿ-480-ಮಂಜುನಾಥ ಗುಗ್ಗರೆರವರನ್ನು (ದೋಷಾರೋಪಣ ಪಟ್ಟಿಯಲ್ಲಿ ಸಾಕ್ಷಿಯನ್ನಾಗಿ ಮಾಡಿರುವುದಿಲ್ಲ) ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಶವ ತನಿಖೆಗಾಗಿ ಕಳುಹಿಸಿಕೊಟ್ಟಿರುತ್ತೇನೆ.

4. ದಿನಾಂಕಃ 19-02-2019 ರಂದು ಚಾಸಾ-21 ರವರು ಶಿವಮೊಗ್ಗ ಆಸ್ಪತ್ರೆಯಿಂದ ಮೃತ ನಾಗರತ್ನ ಇವರ ಶವ ತನಿಖೆಯನ್ನು ನಡೆಸಿ, ನಿ.ಪಿ.4-ರ ಶವ ತನಿಖಾ ವರದಿಯನ್ನು ತಂದು ಠಾಣೆಗೆ ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ.

5. ದಿನಾಂಕಃ 20-02-2019 ರಂದು ಈ ಪ್ರಕರಣದ ಆರೋಪಿಯ ಪತ್ತೆ ಬಗ್ಗೆ ಹೆಚ್ ಸಿ 330 ಪ್ರಸನ್ನ ರವರನ್ನು ನೇಮಕ ಮಾಡಿ ಕಳುಹಿಸಿದ್ದು, ಅದೇ ದಿನ ಮಧ್ಯಾಹ್ನ 12.00 ಗಂಟೆ ಸಮಯಕ್ಕೆ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ಠಾಣೆಯಲ್ಲಿ ನನ್ನ ಮುಂದೆ ಹಾಜರುಪಡಿಸಿದ್ದು, ಆರೋಪಿಯ ಮೇಲೆ ದಸ್ತಗಿರಿ ಕ್ರಮ

ಜರುಗಿಸಿರುತ್ತೇನೆ. ನಂತರ ಆರೋಪಿಯನ್ನು ರಿಮಾಂಡ್ ಅರ್ಜಿಯೊಂದಿಗೆ ಸಿಬ್ಬಂದಿಗಳ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

6. ಅದೇ ದಿನ ಅಂದರೆ ದಿನಾಂಕಃ 20-02-2019 ರಂದು ನಾನು ಮೃತೆ ವಾಸವಿದ್ದ ಮನೆ ಅಂದರೆ ಕೃತ್ಯ ನಡೆದ ಸ್ಥಳವಾದ ಮಠದಗದ್ದೆ, ಹೆದ್ಸೆ ಗ್ರಾಮಕ್ಕೆ ಹೋಗಿ, ಮೃತಳ ತಾಯಿ ಶಾಂತಮ್ಮ ತೋರಿಸಿದ ಜಾಗದಲ್ಲಿ ಪಂಚರಾದ ಚಾಸಾ-9 ಮತ್ತು 10 ರವರ ಸಮಕ್ಷಮ ಸಂಜೆ 5.00 ರಿಂದ 5.30 ರವರೆಗೆ ನಿ.ಪಿ.8 ರಂತೆ ಮಹಜರ್ ಕ್ರಮ ಜರುಗಿಸಿರುತ್ತೇನೆ ಹಾಗೂ ಆ ಸಂದರ್ಭದಲ್ಲಿ ನಿ.ಪಿ.9 ರ ಫೋಟೋ ಸಹಾ ತೆಗೆಸಿರುತ್ತೇನೆ. ನಿ.ಪಿ.8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 8(ಸಿ) ಎಂದು ಗುರುತಿಸಲಾಯಿತು.

7. ಅದೇ ದಿನ ಅಂದರೆ ದಿನಾಂಕಃ 20-02-2019 ರಂದು ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-11 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

8. ದಿನಾಂಕಃ 02-03-2019 ರಂದು ಮೃತೆಯ ವಿಸೆರಾವನ್ನು ಕೊಡುವಂತೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ.

9. ದಿನಾಂಕಃ 03-04-2019 ರಂದು ಕೃತ್ಯ ನಡೆದ ಸ್ಥಳದ ದಾಖಲೆಯನ್ನು ಕೊಡುವಂತೆ ಗ್ರಾಮ ಪಂಚಾಯ್ತಿ ಪಿಡಿಓರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ನಿ.ಪಿ.30 ಎಂದು ಗುರುತಿಸಲಾಯಿತು.

10. ಅದೇ ದಿನ ಅಂದರೆ ದಿನಾಂಕಃ 03-04-2019 ರಂದು ಈ ಪ್ರಕರಣದ ಮೃತೆಗೆ ಚಿಕಿತ್ಸೆ ನೀಡಿದ ಬಗ್ಗೆ ಕೇಸ್ ಶೀಟನ್ನು ನೀಡುವಂತೆ ಡಾಃ ಬಾಲಕೃಷ್ಣ ವೈದ್ಯಾಧಿಕಾರಿಗಳು ಇವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ.

11. ದಿನಾಂಕಃ 30-04-2019 ರಂದು ಪಿಡಿಒರವರಿಂದ ಬಂದ ಕೃತ್ಯ ನಡೆದ ಸ್ಥಳದ ದಾಖಲೆಯ ದೃಢೀಕರಣ ಪತ್ರವನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಕೃತ್ಯ ನಡೆದ ಸ್ಥಳವು ಶ್ರೀಮತಿ ಶಾಂತ ಕೋಂ ರಂಗಯ್ಯರವರಿಗೆ ಅಂದರೆ ಮೃತೆಯ ತಾಯಿಗೆ ಸೇರಿದ್ದು ಎಂದು ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

12. ದಿನಾಂಕಃ 08-05-2019 ರಂದು ಡಾಃ ಬಾಲಕೃಷ್ಣರವರು ಮೃತೆಗೆ ಚಿಕಿತ್ಸೆ ನೀಡಿದ ಬಗ್ಗೆ ವರದಿಯನ್ನು ನಿ.ಪಿ.18 ಮತ್ತು 19 ರಂತೆ ನೀಡಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

13. ದಿನಾಂಕಃ 17-05-2019 ರಂದು ಕೊಪ್ಪದ ಪ್ರಶಮನಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮೃತೆಯ ಸ್ಕ್ಯಾನಿಂಗ್ ವರದಿಯನ್ನು ನೀಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ದಿನಾಂಕಃ 20-05-2019 ರಂದು ಕೊಪ್ಪದ ಪ್ರಶಮನಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ನಿ.ಪಿ.13 ರಂತೆ ಮೃತೆಯ ಸ್ಕ್ಯಾನಿಂಗ್ ವರದಿಯನ್ನು ನೀಡಿದ್ದು, ಅದನ್ನು ಸ್ವೀಕರಿಸಿರುತ್ತೇನೆ.

14. ದಿನಾಂಕಃ 22-05-2019 ರಂದು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಿಂದ ಮೃತೆಯ ವಿಸೆರಾ ಮತ್ತು ನಿ.ಪಿ.24 ರ ಪಿ.ಎಂ.ವರದಿ ಹಾಗೂ control swab, vaginal swab ಬಂದಿದ್ದು, ಅವುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಆರ್.ಎಫ್.ಎಸ್.ಎಲ್. ಮಂಗಳೂರಿಗೆ ನಮ್ಮ ಸಿಬ್ಬಂದಿಯಾದ ಗುರುಮೂರ್ತಿ- ಹೆಚ್.ಸಿ.239 ಇವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ.

15. ದಿನಾಂಕಃ 18-11-2019 ರಂದು ಹೊಸ ಪಿ.ಎಸ್.ಐ.ರವರು ಬಂದಿದ್ದರಿಂದ ಈ ಪ್ರಕರಣದ ಕಡತವನ್ನು ಅವರಿಗೆ ಹಸ್ತಾಂತರಿಸಿರುತ್ತೇನೆ.

16. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಆ ದಿನ ನನ್ನ ಮುಂದೆ ಠಾಣೆಯಲ್ಲಿ ಹಾಜರುಪಡಿಸಿದ ಆರೋಪಿ ಈತನೇ ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರಃಶ್ರೀ ಐ ಎಸ್ ಟಿ ವಕೀಲರಿಂದಃ**

17. ಕೊಪ್ಪ ಆಸ್ಪತ್ರೆಯಿಂದ ಗಾಯಾಳುವನ್ನು ಶಿವಮೊಗ್ಗ ಆಸ್ಪತ್ರೆಗೆ ಕಳುಹಿಸಿ ಕೊಟ್ಟಿರುವ referral order ನ್ನು ನಾನು ಪಡೆದುಕೊಂಡಿಲ್ಲ. ಆರೋಪಿ ಪತ್ತೆಗೆ ಲಿಖಿತ ನಿರ್ದೇಶನ ನೀಡಿಲ್ಲ. ಸಿಬ್ಬಂದಿಯವರು ಆರೋಪಿಯನ್ನು ವರದಿಯೊಂದಿಗೆ ಹಾಜರುಪಡಿಸಿಲ್ಲ.

18. ಮೃತಳ ಮನೆಗೆ ಹೋದ ಸಂದರ್ಭದಲ್ಲಿ ಫಿರ್ಯಾದಿಯಲ್ಲಿ ಹೇಳಲಾದಂತಹ ಔಷಧಿ/ ಮಾತ್ರೆಗೆ ಸಂಬಂಧಿಸಿದ ಯಾವುದೇ ಕುರುಹುಗಳು ದೊರೆತಿಲ್ಲ. ನನ್ನ ತನಿಖಾ ಕಾಲದಲ್ಲಿ ಮಾತ್ರೆಯನ್ನು ಯಾವತ್ತು, ಎಲ್ಲಿಂದ, ಯಾವ ಸ್ಥಳದಲ್ಲಿ ಮೃತೆಗೆ ತಂದುಕೊಟ್ಟಿದ್ದ ಎಂದು ನನಗೆ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ.

19. ಆರೋಪಿ ಮತ್ತು ಮೃತೆ ಇಬ್ಬರೂ ಒಟ್ಟಿಗೆ ಇದ್ದುದನ್ನು ನೋಡಿದವರು ಯಾರಾದರೂ ನನ್ನ ಮುಂದೆ ಸಾಕ್ಷಿ / ಹೇಳಿಕೆ ಕೊಟ್ಟಿಲ್ಲ. ಚಾಸಾ-11-ಶಾಂತಾ ಮತ್ತು ಚಾಸಾ-12-ಚಂದ್ರು ಇವರಿಬ್ಬರೂ ಆರೋಪಿ ಮತ್ತು ಮೃತೆ ಒಟ್ಟಿಗೆ ಓಡಾಡುತ್ತಿದ್ದುದನ್ನು ನಾವು ನೋಡಿದ್ದೇವೆಂದು ಹೇಳಿಕೆ ಕೊಟ್ಟಿಲ್ಲ.

20. ಆಸ್ಪತ್ರೆಯ ದಾಖಲಾತಿಗಳು ಬೇಕಿದ್ದಲ್ಲಿ ಕಡತಗಳ ಚಾರ್ಜ್ ಯಾರಿರುತ್ತಾರೆ ಅವರಿಗೆ ನೋಟೀಸು ಕೊಡುತ್ತೇವೆ ಎನ್ನುವುದು ಸರಿ. ಸಾಕ್ಷಿಯು ಮುಂದುವರಿದು ಈ ಪ್ರಕರಣದಲ್ಲಿ ಚಿಕ್ಕ ಆಸ್ಪತ್ರೆ ಆಗಿದ್ದರಿಂದ ನೇರವಾಗಿ ವೈದ್ಯರಿಗೆ ಕೊಟ್ಟಿದ್ದೇನೆ ಎಂದು ಹೇಳಿರುತ್ತಾರೆ. ನಿ.ಪಿ.19 ರ ಪ್ರಕಾರ ವೈದ್ಯಾಧಿಕಾರಿ ಮೃತೆಗೆ ಹೆರಿಗೆ ವಾರ್ಡಿನಲ್ಲಿ ಚಿಕಿತ್ಸೆ ಕೊಡಲಾಗಿದೆ ಎಂದು ನಮೂದಿಸಿದ್ದಾರೆ ಎಂದರೆ ಸರಿ.

21. ಹೆರಿಗೆ ವಾರ್ಡಿನಲ್ಲಿ ಚಿಕಿತ್ಸೆ ನೀಡಿದಲ್ಲಿ ಅದಕ್ಕೆ ಪ್ರತ್ಯೇಕವಾದ ದಾಖಲಾತಿಗಳು ಅಂದರೆ ಚಿಕಿತ್ಸೆ ನೀಡಿದ ಬಗ್ಗೆ ನರ್ಸಿಂಗ್ ಚಾರ್ಜ್ ರಿಜಿಸ್ಟರ್ ಇಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗಾಯಾಳುವಿಗೆ ರಕ್ತ ನೀಡಿದ ಬಗ್ಗೆ ರಕ್ತ ಸಂಗ್ರಹ ಕೊಠಡಿಗೆ ಕೋರಿಕೆ ಪತ್ರ ಕೊಟ್ಟ ಬಗ್ಗೆ ದಾಖಲೆಯನ್ನು ಸಂಗ್ರಹಿಸಿಲ್ಲ.

22. ನಿ.ಪಿ.18 ಎಂದು ಗುರುತಿಸಲಾದ ದಾಖಲೆಯು duplicate ದಾಖಲೆ ಆಗಿದ್ದು, ಅದರ ಮೂಲ ದಾಖಲೆ ಎಲ್ಲಿಗೆ ಎಂದು ವೈದ್ಯಾಧಿಕಾರಿಗಳಿಗೆ ಕೇಳಿದ್ದಕ್ಕೆ, ವೈದ್ಯಾಧಿಕಾರಿಯು original ದಾಖಲೆ ಕೊಡಲು ಬರುವುದಿಲ್ಲ ಎಂದು ನನಗೆ ತಿಳಿಸಿರುತ್ತಾರೆ. original ದಾಖಲೆಯ ಯಥಾ ನಕಲನ್ನು ವೈದ್ಯಾಧಿಕಾರಿಯು ನಮಗೆ ಕೊಟ್ಟಿರುವುದಿಲ್ಲ.

23. ನನ್ನ ತನಿಖಾ ಕಾಲದಲ್ಲಿ ಜಯಪುರದಲ್ಲಿರುವ ಔಷಧಿಗಳ ಅಂಗಡಿಗೆ ಹೋಗಿ ಆರೋಪಿಯು ಇಂತಹ ಮಾತ್ರೆಯನ್ನು ಖರೀದಿಸಿದ್ದಾನೋ ಇಲ್ಲವೋ ಎಂಬ ಬಗ್ಗೆ ವಿಚಾರಿಸಿಲ್ಲ. ಆರೋಪಿಯನ್ನು ಈ ಘಟನೆ ಬಗ್ಗೆ ವಿಚಾರಣೆ ಮಾಡಿದಾಗ ಆರೋಪಿಯು ಈ ಘಟನೆಯ ಬಗ್ಗೆ ಈ ಘಟನೆಯಲ್ಲಿ ತನ್ನ ಭಾಗಿತ್ವವನ್ನು ಒಪ್ಪಿಕೊಂಡಿಲ್ಲ. ಸ್ವ ಇಚ್ಛಾ ಹೇಳಿಕೆಯಲ್ಲಿ ಆರೋಪಿ ಏನು ಹೇಳುತ್ತಾನೆಂದು ಬರೆದುಕೊಳ್ಳಬೇಕು ಎಂದರೆ ಸರಿ. ಈ ಪ್ರಕರಣದಲ್ಲಿ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವಶ್ಯಕತೆ ಇರಲಿಲ್ಲ ಎಂದು ಹೇಳಿರುತ್ತಾರೆ.

24. ತನಿಖಾ ಕಾಲದಲ್ಲಿ ಮೃತೆಯ ಮರಣಕ್ಕೆ ವೈದ್ಯರ ನಿರ್ಲಕ್ಷ್ಯತೆಯೇ ಕಾರಣ ಎಂದು ನಮಗೆ ಸ್ಪಷ್ಟವಾಗಿ ತಿಳಿದಿತ್ತು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಆರೋಪಿಗೆ ಅನುಕೂಲವಾಗುವಂತಹ ಯಾವುದೇ ದಾಖಲೆಗಳನ್ನು ಸಂಗ್ರಹಿಸದೆ ವೈದ್ಯರಿಗೆ ಅನುಕೂಲವಾಗುವಂತೆ ಎಲ್ಲಾ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ವೈದ್ಯಾಧಿಕಾರಿಯು ಮೃತೆಯ ಚಿಕಿತ್ಸಾ ಕಾಲದಲ್ಲಿ ಗರ್ಭಪಾತವಾಗಿರುವ ಭ್ರೂಣವನ್ನು ಸಹಾ ಸಂಗ್ರಹಿಸಿಲ್ಲ ಎಂದರೆ ಸರಿ. ವೈದ್ಯರಿಗೆ ಅನುಕೂಲವಾಗುವಂತೆ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-10-11-2025
(ರಾಜೇಶ್ವರಿ ಎನ್ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿ:-

Visit **ecourts.gov.in** for updates or download mobile app “**eCourts Services**” from Android or iOS